ತುಂಗಭದ್ರಾ ಜಲಾಶಯದಿಂದ ಐದು ಕೆರೆಗಳಿಗೆ ನೀರನ್ನು ಸರಬರಾಜು ಮಾಡುವುದು

೩೬೯ (೨೦೯) ಶ್ರೀ ಕೆ.ಹೆಚ್. ಕುರುಡಗಿ (ಮುಂಡರಗಿ).—ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ:—

(ಅ) ತುಂಗಭದ್ರಾ ಜಲಾಶಯದಿಂದ ಐದು ಕೆರೆಗಳಿಗೆ ನೀರು ಸರಬರಾಜು ಮಾಡಲು ಆಲೂರಂಜಿಲ್ಲೆ, ದಂಬಳ, ರಾಮೇನಹಳ್ಳಿ, ಶಿರೋಳ ಊರಿನಲ್ಲಿರುವ ಕೆರೆಗಳು ಯೋಜನೆ ಮಾಡಿ ಸರ್ವೇ ಮಾಡಿಸಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ?

(ಆ) ಹಾಗಿದ್ದಲ್ಲಿ ಈ ಯೋಜನೆಯ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು?

(ಇ) ಈ ಯೋಜನೆಗೆ ತಗಲುವ ಹಣದ ಪೊತ್ತವೆಷ್ಟು?

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ದಕ್ಷಿಣ ಕನ್ನಡ ಜಿಲ್ಲೆಯ ನೆರಿಯ ಎಂಬಲ್ಲಿ ಅಣೆಕಟ್ಟು ಕಟ್ಟುವ ವಿಚಾರ

೩೭೦ (೨೫೨) ಶ್ರೀ ಎನ್. ಶಿವರಾವ್ (ಬಂಟವಾಳ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:—

(ಅ) ದಕ್ಷಿಣ ಕನ್ನಡ ಜಿಲ್ಲೆಯ ನೆರಿಯ ಎಂಬಲ್ಲಿ ಅಣೆಕಟ್ಟು ಕಟ್ಟುವ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

(ಆ) ಹಾಗಿದ್ದಲ್ಲಿ, ಈ ಕಾರ್ಯ ಈಗ ಯಾವ ಹಂತದಲ್ಲಿದೆ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಅಹುದು

(ಆ) ಸವಿಸ್ತಾರ ಅನ್ವೇಷಣೆಯಲ್ಲಿದೆ.

ಮೊನ್ನೆ ಇದೇ ಸದನದಲ್ಲಿ ಇದರ ಬಗ್ಗೆ ಪೂರ್ಣ ವಿವರಣೆ ಕೊಟ್ಟಿದ್ದೇನೆ.

ಅಧ್ಯಕ್ಷರು.—ಹೌದು ಉತ್ತರ ಕೊಟ್ಟಾಗಿದೆ, ಮತ್ತೆ ಏಕೆ ಎರಡನೇ ಸಾರಿ ಕೇಳುತ್ತಿದ್ದೀರಿ?

ಶ್ರೀ ಎನ್. ಶಿವರಾವ್.—ಇದನ್ನು ಬೇಗ ಮಾಡಿ ಕೊಡಿ ಎಂದು ಮೊದಲೇ ಇದಕ್ಕೆ ಮುಂಜೂರಾತಿ ದೊರೆತು ಕೆಲಸ ಪ್ರಾರಂಭವಾಗಿದೆಯೇ? ಇವತ್ತಿನ ದಿವಸ, ನೇತ್ರಾವತಿಯ ಎರಡೂ ಕಡೆಗಳಲ್ಲಿ ರೈತರು ನೂರಾರು ಪಂಪುಸೆಟ್ಟುಗಳನ್ನು ಹಾಕಿಕೊಂಡು ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಜೊತೆಗೆ ಮಂಗಳೂರಿನ ರಾಸಾಯನಿಕ ಗೊಬ್ಬರ ಕಾರ್ಖಾನೆಗೆ ಕೂಡ್ಡ ಆ ನದಿಯ ನೀರಿನಿಂದ ಕುಡಿಯುವ ನೀರಿನ ವ್ಯವಸ್ಥೆ ಆಗಿದೆ. ಅಣೆಕಟ್ಟನ್ನು ಕಟ್ಟಿದ ತಕ್ಷಣ ಹರಿಯುವ ನೀರು ಕಡಿಮೆ ಯಾದರೆ ರೈತರ ಗತಿ ಏನು? ಅವರಿಗೆ ಕಾಲುವೆ ಮೂಲಕ ನೀರು ಒದಗಿಸಿ ರಕ್ಷಣೆ ಕೊಡುತ್ತೀರಾ? ಈಗ ಯಾವ ಪ್ರಮಾಣದಲ್ಲಿ ನೀರು ಉಪಯೋಗಿಸುತ್ತಿದ್ದಾರೆ ಅದೇ ಪ್ರಮಾಣದಲ್ಲಿ ಉಪಯೋಗಿಸುವುದಕ್ಕೆ ಮುಂದೆ ಅಣೆಕಟ್ಟು ಕಟ್ಟಿದ ಮೇಲೂ ಪರವಾನಿಗೆ ಕೊಡುತ್ತೀರಾ? ಹೋದ ವರ್ಷ ಕ್ಯಾಮ್ಸ ಬಂದಾಗ ಮಂಗಳೂರು ನಗರದವರು ಅರಬ್ಬೀ ಸಮುದ್ರದ ಉಪ್ಪು ನೀರನ್ನು ಕುಡಿದ ಪರಿಸ್ಥಿತಿ ಇದೆ. ಆದ್ದರಿಂದ ಅಲ್ಲಿ ಅಣೆಕಟ್ಟು ಕಟ್ಟಿದಾದ ಮೇಲೆ ಹರಿಯುವ ನೀರು ಕಡಿಮೆ ಆದಾಗ ಉಪ್ಪು ನೀರು ಕುಡಿಯದಂತೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಹೆಚ್.ಡಿ. ದೇವೇಗೌಡ.—ಸದಸ್ಯರು ಹೇಳಿದ ಎಲ್ಲಾ ವಿಷಯಗಳನ್ನು ಮತ್ತೆ ಪರಿಶೀಲನೆ ಮಾಡಿಸುತ್ತೇನೆ. ಪ್ರಾಜೆಕ್ಟನ್ನು ಕೈಗೆತ್ತಿಕೊಳ್ಳುವ ಕಾಲದಲ್ಲಿ ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಯಾವ ತೊಂದರೆಯೂ ಆಗದಂತೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಇಂದಿನ ಕಾರ್ಯಕ್ರಮದ ಪಟ್ಟಿಯಲ್ಲಿರುವ ಲಿಖಿತ ಉತ್ತರಗಳನ್ನು ಸಭೆಯ ಮುಂದಿಡುವುದಕ್ಕೆ ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.